# ಭಿಕ್ಷೆಯ ಮಾದರಿ

ಭಿಕ್ಷೆಗೆ ಎರಡು ರೂಪಗಳು. ದೈನ್ಯತೆ, ಸಂಕಟವನ್ನು ಸೂಚಿಸುವಂತಹದ್ದು ಒಂದು ಬಗೆ. ಸಂತೋಷ ಮತ್ತು ಧನ್ಯತೆಯನ್ನು ಸೂಚಿಸುವಂತಹದ್ದು ಇನ್ನೊಂದು ಬಗೆ. ಮೊದಲ ಬಗೆಯ ಭಿಕ್ಷೆಯಲ್ಲಿ ಅಸಹಾಯಕತೆ ಎದ್ದುಕಾಣುತ್ತದೆ, ಅನುಕಂಪ ಕಾಣಿಸುತ್ತದೆ. ಎರಡನೇ ಬಗೆಯ ಭಿಕ್ಷೆ ಬದುಕಿನ ಘನತೆ–ಸಾರ್ಥಕತೆ ವ್ಯಕ್ತಗೊಳ್ಳುವಂತಹದ್ದು. ಇಲ್ಲಿಯೂ ಹಸಿವಿದೆ. ಅದು ಜ್ಞಾನದ ಹಸಿವು. ಪಡೆಯುವವರಿಗೆ ಸಂತೋಷ, ನೀಡುವವರಿಗೆ ಧನ್ಯತಾಭಾವ.

ಭಿಕ್ಷೆಯ ಎರಡು ಆಯಾಮಗಳನ್ನು ಎರಡು ಚಲನಚಿತ್ರ ಗೀತೆಗಳ ಮೂಲಕ ಗಮನಿಸಬಹುದು. 'ಬೇಡರ ಕಣ್ಣಪ್ಪ' ಸಿನಿಮಾದ 'ಶಿವಪ್ಪ ಕಾಯೊ ತಂದೆ' ಬೇಡುವವರ ಕಂಠಕ್ಕೆ ಸುಲಭಕ್ಕೆ ಒದಗಿಬರುವ ಹಾಡು. ಹಸಿದವರ ಆರ್ತನಾದವನ್ನು ಸಮಾಜದ ಎದೆಗೆ ನಾಟುವಷ್ಟು ತೀವ್ರವಾಗಿರುವ ಈ ಗೀತೆ ಕೇಳಿದಾಗ, ಹಾಡುವ ವ್ಯಕ್ತಿಯ ಬಗ್ಗೆ ಕೇಳುಗರಲ್ಲಿ ಕರುಣೆ ಜಿನುಗುತ್ತದೆ. ಹಾಡುಗನ ಹಸಿವೆ–ಸಂಕಟಗಳಿಗೆ ಅನುಗುಣವಾಗಿ 'ಶಿವಪ್ಪ ಕಾಯೊ ತಂದೆ' ಭಾವತೀವ್ರತೆಯನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಬೇಡುವವನಿಗೆ ಒಡಲ ಸಂಕಟವಷ್ಟೇ ಮುಖ್ಯವಾಗಿದೆ. ಶುದ್ಧ, ಅಶುದ್ಧ, ನಾದ, ವೇದ ಒಂದನ್ನೂ ಅರಿಯದ ಅಥವಾ ಮುಖ್ಯವಾಗಿ ಭಾವಿಸದ ಇಲ್ಲಿನ ಯಾಚನೆ, 'ಬೆಂದ ಜೀವ ಮುಂದು ಕೂತೆ ಬಂದು ನೋಡಯ್ಯ' ಎನ್ನುತ್ತದೆ. 'ಶೋಕವ ಹರಿಸುವ ದೇವ ನೀನಾದರೆ ಬೇಟೆಯ ತೋರೊ ಎನ್ನಪ್ಪ / ಲೋಕವನಾಳುವ ನೀನಪ್ಪಾ ಬೇಟೆಯ ತೋರೊ ಎನ್ನಪ್ಪ' ಎಂದು ಪ್ರಾರ್ಥಿಸುತ್ತದೆ. ಉಳ್ಳವರ ಎದುರಿನ ದೀನರ ಮೊರೆ ಇದು.

ಸಂಕಟಗಳನ್ನೆಲ್ಲ ಪರಿಹರಿಸಿರುವ ಸಂಕಟಹರನನ್ನು ಬೇಡಲು ಹೋದರೆ, ಭಗವಂತನಿಗೂ ಮೊದಲು ಅಗಣಿತ ಸಂಕಟಗಳ ಪ್ರತಿನಿಧಿಗಳಂತೆ ದೇಗುಲಗಳ ಪ್ರವೇಶದ್ವಾರದಲ್ಲಿ ಬೇಡುವವರು ಎದುರಾಗುತ್ತಾರೆ. ಬಸ್ಸು ರೈಲು ನಿಲ್ದಾಣಗಳಲ್ಲಿ ಜೀವನದ ಅಸಂಗತ ಬಿಂಬಗಳಂತೆ ಯಾಚನೆಯ ಸ್ವರಗಳು ತಡೆದುನಿಲ್ಲಿಸುತ್ತವೆ. ಇಲ್ಲಿನದು, ಸಹೃದಯರ ಕರುಣೆಯನ್ನು ನೆಚ್ಚಿದ ಭಿಕ್ಷಾಟನೆ. ಬೇಡುವವರ ಸೋತ ಕಣ್ಣುಗಳು ಅವರ ದುರ್ದೆಸೆಯನ್ನಷ್ಟೇ ಸೂಚಿಸುವುದಿಲ್ಲ, ಸಮಾಜದಲ್ಲಿ ಎಲ್ಲವೂ ಸರಿಯಾಗಿಲ್ಲ ಸಮವಾಗಿಲ್ಲ ಎನ್ನುವುದನ್ನೂ ಕಾಣಿಸುವಂತಿರುತ್ತವೆ. ಕರುಣೆ, ಅಸಹಾಯಕತೆಯ ನೆಲೆಯಲ್ಲಿ ನಡೆಯುವ ಭಿಕ್ಷಾಟನೆ ಸಮಾಜದಲ್ಲಿನ ಏರುಪೇರುಗಳಿಗೆ ಕನ್ನಡಿ ರೂಪದ್ದು.

ಭಿಕ್ಷೆಯ ಮತ್ತೊಂದು ಸ್ವರೂಪವನ್ನು ಧ್ವನಿಸುವ ಗೀತೆ 'ಸಂಧ್ಯಾರಾಗ' ಸಿನಿಮಾದ್ದು. 'ದೀನ ನಾ ಬಂದಿರುವೆ ಬಾಗಿಲಲಿ ನಿಂತಿರುವೆ ಜ್ಞಾನಭಿಕ್ಷೆಯ ನೀಡು ಗುರುವೆ' ಎಂದು ಬೇಡುವ, ಲಕ್ಷ್ಮಣನೆಂಬ ಸಂಗೀತ ಭಿಕ್ಷೆಯ ಬೇಡುವ ಯಾಚಕನ ದೈನ್ಯದಲ್ಲಿ ಇರುವುದು ದೌರ್ಬಲ್ಯವಲ್ಲ, ಕಲಿತೇ ತೀರಬೇಕಾದ ಹಂಬಲ. ಜ್ಞಾನದ ಉತ್ಕಟ ಅಪೇಕ್ಷೆ. ವಿದ್ಯಾರ್ಥಿ ತನ್ನನ್ನು ದೀನನೆಂದು ಬಗೆದು, ಜ್ಞಾನಭಿಕ್ಷೆಯನ್ನು ದಯಪಾಲಿಸುವ ಎಂದು ಗುರುವನ್ನು ಪ್ರಾರ್ಥಿಸಿದರೂ, ಈ ಯಾಚನೆಯನ್ನು ಸಮಾಜ ಘನತೆಯ ರೂಪದಲ್ಲಿ ನೋಡುತ್ತದೆ. ಇಲ್ಲಿನ ಯಾಚಕನದು ಬೆಂದ ಜೀವವಲ್ಲ, ಇಲ್ಲಿರುವುದು ಹೊಟ್ಟೆಯ ಹಸಿವೆಯೂ ಅಲ್ಲ. ಗುರುಕೃಪೆಯನ್ನು ಬಯಸಿ ಬಂದ ಯಾಚಕನದು ಜ್ಞಾನಸುಧೆಗೆ ಹಾತೊರೆವ ಕ್ಷುಧೆ.

ಗುರುವಿನಿಂದ ಶಿಷ್ಯನಿಗೆ ದೊರೆಯುವ ವಿದ್ಯಾರೂಪದ ಭಿಕ್ಷೆ ಕ್ಷಣಿಕವಾದುದಲ್ಲ, ಶಾಶ್ವತವಾದುದು. ಅನ್ನದ ರೂಪದಲ್ಲಿ ದೊರೆಯುವ ಭಿಕ್ಷೆ ಪಡೆದವನ ಆ ಹೊತ್ತಿನ ಹಸಿವನ್ನು ನೀಗುತ್ತದೆ. ವಿದ್ಯೆ ಹಾಗಲ್ಲ. ಅದು ಜೀವನವಿಡೀ ಪೊರೆಯುತ್ತದೆ, ಅನ್ನಕ್ಕೆ ದಾರಿಯೂ ಆಗುತ್ತದೆ. ಆ ಕಾರಣದಿಂದಲೇ, ಅಸಹಾಯಕತೆ–ಅನುಕಂಪ ರೂಪದ ಭಿಕ್ಷಾಟನೆಯನ್ನು ಯಾವ ಸಮಾಜವೂ ಬಯಸುವುದಿಲ್ಲ. ಸ್ವಸ್ಥ ಸಮಾಜ, ಜ್ಞಾನರೂಪದ ಕೊಡು–ಕೊಳು ಹೆಚ್ಚಾಗುವುದನ್ನು ನಿರೀಕ್ಷಿಸುತ್ತದೆ.

ಮತ್ತೊಂದು ಬಗೆಯ ಭಿಕ್ಷೆಯೂ ಇದೆ. ದೈನ್ಯ ಹಾಗೂ ದೌರ್ಬಲ್ಯದಿಂದ ಹೊರತಾದ ಭಿಕ್ಷಾಟನೆಯದು. ಜ್ಞಾನದ ಕೊಡು–ಕೊಳುವಿಗಿಂತಲೂ ಭಿನ್ನವಾದುದು. ಇದು ಮಾನವೀಯತೆಯ ದಾರಿಯಲ್ಲಿ ನಡೆಯುವ ಅನುಸಂಧಾನ. ಇಲ್ಲಿನ ಭಿಕ್ಷುಕರಾದರೂ ಯಾರು? ಬುದ್ಧ, ಗಾಂಧಿಯಂಥವರು. ಬುದ್ಧ ಪ್ರೇಮಭಿಕ್ಷು. ಗಾಂಧಿ ಸ್ವಾತಂತ್ರ್ಯ–ಸ್ವರಾಜ್ಯದ ಯಾಚಕ.

ಆರ್ತರ ಸಂಕಟಗಳಿಗೆ ಉತ್ತರ ಹುಡುಕುತ್ತಾ ಮನೆ–ಮನಗಳನ್ನು ತಟ್ಟುತ್ತಾ ಹೋದ ಬುದ್ಧ ಜಗತ್ತಿನ ಪ್ರತಿಯೊಬ್ಬರೂ ಭಿಕ್ಷುಕರೇ ಎನ್ನುವುದನ್ನು ಮನದಟ್ಟು ಮಾಡಿಸಿದ ಮಹಾನುಭಾವ. ಅನ್ನ, ಪ್ರೇಮ, ಕಾಮ, ಸಂಪತ್ತು, ಸಂಬಂಧ – ಯಾವುದು ಹಸಿವೆಯಲ್ಲ? ಪ್ರತಿಯೊಬ್ಬರೂ ತಂತಮ್ಮ ಹಸಿವೆಯನ್ನು ನೀಗಿಸಿಕೊಳ್ಳಲಿಕ್ಕಾಗಿ ಮತ್ತೊಬ್ಬರನ್ನು ಬೇಡುತ್ತಲೇ ಇರುತ್ತಾರೆ. ಆದರೆ, 'ಬೇಡು'ವಿಕೆಗೆ ಘನತೆ ತಂದುಕೊಡುವುದು ಪ್ರೇಮಭಿಕ್ಷುಗಳು. ಪ್ರೇಮದೆದುರು ಯಾರು ಭಿಕ್ಷುಕರಲ್ಲ? ಈ ಭಿಕ್ಕುಗಳು, ಜಗತ್ತಿಗೆ ಪ್ರೇಮವನ್ನು ಹಂಚುತ್ತಾರೆ, ಜಗತ್ತಿನಿಂದ ಪ್ರೇಮವನ್ನು ಪಡೆಯುತ್ತಾರೆ, ಭೂಗೋಳವನ್ನು ಪ್ರೇಮಮಯವಾಗಿಸುವ ಪ್ರಯತ್ನದಲ್ಲಿ ಬದುಕನ್ನು ಸವೆಸುತ್ತಾರೆ. ಬುದ್ಧ ತನ್ನನ್ನು ಎಡತಾಕಿದವರ ಅವಗುಣಗಳನ್ನು ಭಿಕ್ಷೆಯ ರೂಪದಲ್ಲಿ ಪಡೆದು, ಅವರೆದೆಗಳಲ್ಲಿ ಪ್ರೇಮದ ಬೀಜಗಳನ್ನು ಊರಿದ. ಕ್ರೌರ್ಯದ ವ್ಯಾಖ್ಯಾನದಂತಿದ್ದ ಅಂಗುಲೀಮಾಲ, ಬುದ್ಧಸನ್ನಿಧಾನದಲ್ಲಿ ಕ್ರೌರ್ಯವ ನೀಗಿಕೊಂಡು, ಪ್ರೇಮವ ಪಡೆದುಕೊಂಡ. ಗಾಂಧೀಜಿಯವರ ಜೋಳಿಗೆ ಮತ್ತೂ ದೊಡ್ಡದು. ಅವರು ನಡೆದಲ್ಲೆಲ್ಲ ಬೇಡಿದರು. ಬೇಡಿದ್ದನ್ನು ಅಸ್ಪೃಶ್ಯತೆ ನಿವಾರಣೆಯ ಕಾರ್ಯಕ್ರಮಗಳಿಗೆ ವಿನಿಯೋಗಿಸಿದರು. ಜೋಳಿಗೆಯನ್ನು ಭಿಕ್ಷಾಪಾತ್ರೆಯಾಗಿಸಿಕೊಂಡು, ಭಕ್ತರಿಂದ ದುಶ್ಚಟಗಳ ಭಿಕ್ಷೆ ಬೇಡಿದ ಸ್ವಾಮೀಜಿಗಳೂ ಇದ್ದಾರೆ.

ಬುದ್ಧ, ಬಾಪು, ವಚನ ಚಳವಳಿಯ ಶರಣರು ಸೇರಿದಂತೆ ವಿಶ್ವದ ಬಹುದೊಡ್ಡ ಪ್ರೇಮಭಿಕ್ಕುಗಳೆಲ್ಲ ತೋರಿರುವುದು ಅಸಂಗ್ರಹ ಗುಣವನ್ನು. ಮಣ್ಣುಸೇರಿದ ಧಾನ್ಯಗಳನ್ನು ಹೆಕ್ಕಿತರುವುದನ್ನು ಕಾಯಕವಾಗಿಸಿಕೊಂಡ ಮಾರಯ್ಯ ಎನ್ನುವ ಶರಣ, ಒಂದು ದಿನ ಅಗತ್ಯಕ್ಕಿಂತ ಹೆಚ್ಚಿನ ಅಕ್ಕಿಯನ್ನು ಸಂಗ್ರಹಿಸಿ ತಂದಾಗ, 'ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ' ಎಂದು ಆತನ ಪತ್ನಿ ಆಯ್ದಕ್ಕಿ ಲಕ್ಕಮ್ಮ ತಿಳಿಹೇಳುತ್ತಾಳೆ. 'ಆಸೆಯೆಂಬುದು, ಅರಸಿಂಗಲ್ಲದೆ, ಶಿವಭಕ್ತರಿಗುಂಟೆ?' ಎಂದು ಪ್ರಶ್ನಿಸುತ್ತಾಳೆ. ನಮಗೆ ಆದರ್ಶ ಆಗಬೇಕಿರುವುದು ಇಂಥ ಶರಣರು. ನಮ್ಮ ಮಕ್ಕಳಿಗೆ ಮಾದರಿ ಆಗಬೇಕಾದವರು ಪ್ರೇಮಭಿಕ್ಷುಗಳು, ಜ್ಞಾನಭಿಕ್ಷುಗಳು.

■ **ಚಂಪಕಮಾಲಾ**

## ಮಾತೇ ಮುತ್ತು

- ಮನಸ್ಸಿನ ವಿಕಾಸವು ಮಾನವನ ಅಸ್ತಿತ್ವದ ಅಂತಿಮ ಗುರಿಯಾಗಿರಬೇಕು.
  — ಬಿ.ಆರ್. ಅಂಬೇಡ್ಕರ್
- ಪರರನ್ನು ಹೀನವಾಗಿ ಪರಿಗಣಿಸಬೇಡಿ. ಅದು ನಿಮ್ಮ ಮನಸ್ಸಿನ ಯೋಗ್ಯತೆಯನ್ನು ಕುಗ್ಗಿಸುತ್ತದೆ.
  —ಒಂದರ್ ಸಾಲ್
- ವರ್ಣಾಶ್ರಮ, ಜಾತಿಪದ್ಧತಿ ಮೇಲು ಕೀಳು ಭಾವನೆ, ಮಧ್ಯಯುಗದ ಕ್ರೂರ ಕರಾಳ ತತ್ವಗಳೆಲ್ಲ ವೈಜ್ಞಾನಿಕ ದೃಷ್ಟಿಯ ಅಗ್ನಿಕುಂಡದಲ್ಲಿ ಭಸ್ಮೀಕೃತವಾಗಬೇಕು.
  — ಕುವೆಂಪು
- ಸರಳ ಜೀವನ ಮತ್ತು ಮೇಲ್ಮಟ್ಟದ ವಿಚಾರ ಮಹಾನ್ ವ್ಯಕ್ತಿಯನ್ನಾಗಿ ಮಾಡುತ್ತದೆ.
  —ಮಹಾತ್ಮ ಗಾಂಧೀಜಿ
- ಪಂಗಡವ ಪಂಗಡವ ವಿಂಗಡಿಸಿ ಕಟ್ಟಿ ಸಂಗಡಿಸಿ ಕೂಡಿರುವ ಬಾಳುವೆಯ ಗುಟ್ಟು ಕಂಗೊಳಿಸೆ ಹಾಗಿರುವ ಬಿರುದನ್ನು ತೊಟ್ಟು ಹೋಗೋಣ ಬಾ ಇನ್ನು ಸೀಮೆಯನು ದಾಟಿ.
  —ಬೇಂದ್ರೆ
- ಹೊಗಳಿಕೆಯ ಮಾಲಿನ್ಯವನ್ನು ತೊಡೆದು ಹಾಕಲು ಏಕಮಾತ್ರ ಉಪಾಯ: ಕೆಲಸ ಮತ್ತು ಇನ್ನಷ್ಟು ಕೆಲಸ.
  —ಆಲ್ಬರ್ಟ್ ಐನ್‌ಸ್ಟೀನ್